CC 38/2025
PW-1
CC 38/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 25.04.2026

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಚ್ ಕೆ ವಕೀಲರಿಂದಃ**

ನನ್ನ ಮತ್ತು ಆರೋಪಿಯ ನಡುವೆ ತರೀಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ತರೀಕೆರೆ ಪೊಲೀಸ್ ಠಾಣೆಯಲ್ಲಿ ನನ್ನ ಮತ್ತು ಆರೋಪಿಯ ನಡುವೆ ನಮ ಸಮಾಜದವರು ಪಂಚಾಯಿತಿಯನ್ನು ಮಾಡಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ನನಗೆ ಗುರುಮೂರ್ತಿ ಎನ್ನುವವರ ಪರಿಚಯ ಇಲ್ಲ. ನನಗೆ ಸೈಯದ್ ಶಾಹಿದ್ ತಂದೆ ಮುಕ್ತಿಯಾರ್ ಎನ್ನುವವರು ಪರಿಚಯ ಇಲ್ಲ. ನನ್ನ ಮತ್ತು ಸೈಯದ್ ಶಾಹಿದ್‌ರವರ ಸಮಕ್ಷಮ ಗುರುಮೂರ್ತಿರವರು ಆರೋಪಿಗೆ 5 ಲಕ್ಷ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಹಣದ ಭದ್ರತೆಗಾಗಿ ಆರೋಪಿಯು 2 ಚೆಕ್ಕುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ 2 ಚೆಕ್ಕುಗಳನ್ನು ಇಟ್ಟು ಕೊಂಡು ನಾನು ಆರೋಪಿಯ ಜೊತೆ ತರೀಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಲಾಟೆ ಮಾಡಿದ್ದೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಿಸಿದಂತೆ ಆಡಿಯೋ, ವೀಡಿಯೋ ಮತ್ತು ಪೊಲೀಸ್ ಠಾಣೆಯಲ್ಲಿ ದಾಖಲೆಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ನನಗೆ ಹಣ ಬಂದಿಲ್ಲ ಎಂದು ಹೇಳಿ ನಮ್ಮ ವಕೀಲರ ಕಡೆಯಿಂದ ದಾಖಲಿಸಿರುತ್ತೇನೆ. ಫರ್ನಿಚರ್ ಹಣ ಬಂದಿಲ್ಲ ಎಂದು ಹೇಳಿ ಈ ಪ್ರಕರಣ ದಾಖಲಿಸಿದ್ದೇನೆ. ಆರೋಪಿಯು ನನಗೆ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ಆರೋಪಿಯು ರೂ.12,33,000/- ಎಂದು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೇರೆಯವರಿಗೆ ನೀಡಿದ ಚೆಕ್ಕನ್ನು ನಾನು ದುರುಪಯೋಗ ಮಾಡಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**